**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5018/2023 ಫ್ರಾಸಾ-11
ಚಾಸಾ-12

ದಿನಾಂಕಃ 18-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಸಿದ್ದರಾಜು |
| **ತಂದೆಯ / ಗಂಡನ ಹೆಸರು** | ಹನುಮಂತರಾಯಪ್ಪ |
| **ವಯಸ್ಸು** | 53 |
| **ಉದ್ಯೋಗ** | ಸಹಾಯಕ ಇಂಜಿನಿಯರ್-2 , ಪಿಡಬ್ಲೂಡಿ , ತುಮಕೂರು |
| **ವಾಸಸ್ಥಳ** | ತುಮಕೂರು |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

**ನಾನು ಆಗಸ್ಟ್ 2021 ರಿಂದ ಆಗಸ್ಟ್ 2024 ರವರೆಗೆ ಮಧುಗಿರಿ ಪಿಡಬ್ಲೂಡಿ ಸಹಾಯ ಇಂಜಿನಿಯರ್ -2 ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.**

ದಿ. 21.03.2023 ರಂದು ಡಿವೈಎಸ್.ಪಿ ಮಧುಗಿರಿ ರವರು ಬಂದ್ರಹಳ್ಳಿ ಗ್ರಾಮದ ರಂಗನಾಥಸಾಮಿ ದೇವಸ್ಥಾನದ ಬಳಿ ಇರುವ ಶ್ರೀಮತಿ ಭಾಗ್ಯಮ್ಮ ರವರ ಅಂಗಡಿಯ ಮುಂಭಾಗದ ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಿಕೊಡಲು ಮನವಿ ಕೊಟ್ಟಿದ್ದು. ಅದರಂತೆ ದಿ.01.04.2023 ರಂದು ನಾನು ಸ್ಥಳಕ್ಕೆ ಬೇಟಿ ಕೊಟ್ಟಿದ್ದು ಅಲ್ಲಿ ಮಧುಗಿರಿ ಪೊಲೀಸ್ ಠಾಣೆಯ ಚಾಸಾ-23 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು ಸ್ಥಳವನ್ನು ಪರಿಶೀಲನೆ ಮಾಡಿ ನಕ್ಷೆ ತಯಾರಿಸಿರುತ್ತೇನೆ. ನ್ಯಾಯಾಲಯದಲ್ಲಿರುವ ಕವಚ ಪತ್ರ ನೋಡಿದೇನು ಅದನ್ನು ಗುರುತಿಸುತ್ತೇನೆ, ಸದರಿ ಕವಚ ಪತ್ರವನ್ನು ನಿಪಿ-15 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ನಕ್ಷೆಯನ್ನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ನಕ್ಷೆಯನ ನಿಪಿ-16 ಎಂದು, ಸಾಕ್ಷಿ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು:- ಆರೋಪಿತರ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**